ಶ್ರೀ ಡಿ. ಮಂಜುನಾಥ್ (ಸನ್ಮಾನ್ಯ ಕಾರ್ಮಿಕ ಸಚಿವರು) —ಮಾನ್ಯ ಅಧ್ಯಕ್ಷರೇ ವಿಷಯ ಈಗ ಗಮನಕ್ಕೆ ಬಂದಿದೆ. ಎನ್‌ಕ್ವೈರಿ ಮಾಡುವುದಕ್ಕಾಗಿ ಎನ್‌ಕ್ವೈರಿ ಆಫೀಸರನ್ನು ನೇಮಕ ಮಾಡಿದ್ದೇವೆ. ಅವರನ್ನು ಒಂದು ವಾರದಲ್ಲಿಯೇ ವರದಿಯನ್ನು ಕೊಡಬೇಕೆಂದು ಹೇಳಿದ್ದೇವೆ. ರಿಪೋರ್ಟ್ ಅವರಿಂದ ಬಂದಮೇಲೆ ಆ ಡಾಕ್ಟರಿನ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

## (೩) ಉಳ್ಳಾಲ ಪೋಲೀಸ್ ಠಾಣೆಗೆ ಕಟ್ಟಡ ಕಟ್ಟುವ ಬಗ್ಗೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಉಳ್ಳಾಲದ ಪೋಲೀಸ್ ಸ್ಟೇಷನ್ ಈಗಲೂ ಬಾಡಿಗೆ ಕಟ್ಟಡದಲ್ಲಿದೆ. ಪೋಲೀಸರಿಗೆ ಕೂಡ ವಸತಿ ಗೃಹಗಳಿಲ್ಲದೆ ತುಂಬಾ ತೊಂದರೆಯಲ್ಲಿರುತ್ತಾರೆ. ಈ ಬಗ್ಗೆ ಉಳ್ಳಾಲದಲ್ಲಿ ಸುಮಾರು ಎರಡು ಎಕರೆ ಸ್ಥಳ ಪೋಲೀಸ್ ಸ್ಟೇಷನ್ ಮತ್ತು ಪೋಲೀಸರ ವಸತಿಗೃಹಗಳಿಗಾಗಿ ಈ ಹಿಂದೆಯೇ ತೆಗೆದಿಟ್ಟಿರುವುದಲ್ಲದೆ ಬೇಲಿ ಹಾಕಿ, ತೆಂಗಿನ ಸಸಿಗಳನ್ನು ನೆಟ್ಟು ಸಿದ್ಧವಾಗಿಡಲಾಗಿದೆ. ಈ ಸ್ವಂತ ಸ್ಥಳದಲ್ಲಿ ಪೋಲೀಸ್ ಸ್ಟೇಷನ್ ಮತ್ತು ವಸತಿ ಗೃಹಗಳನ್ನು ಕಟ್ಟಲು ಅಂದಾಜು ಪತ್ರ ಕೂಡ ಮಾಡಲಾಗಿದೆ. ಈ ವರ್ಷ ಕಟ್ಟಿಸಲಾಗುವುದೆಂದು ಗೃಹ ಸಚಿವರು ಈ ಹಿಂದೆ ಪತ್ರ ಮೂಲಕ ತಿಳಿಸಿರುತ್ತಾರೆ. ಆದ ಕಾರಣ ಉಳ್ಳಾಲದಲ್ಲಿ ಪೋಲೀಸ್ ಸ್ಟೇಷನ್ ಮತ್ತು ಪೋಲೀಸರ ವಸತಿ ಗೃಹಗಳನ್ನು ಈ ವರ್ಷ ಕಟ್ಟಿಸಿಕೊಡುವಂತಾದ್ದು ಅತಿ ಪ್ರಾಮುಖ್ಯವಾಗಿರುತ್ತದೆ. ಈ ಕುರಿತಂತೆ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಪೋಲೀಸ್ ನಿಗಮವೆಂದು ಈ ವರ್ಷ ಮಾಡಿದ್ದೇವೆ. ಸುಮಾರು ೭೫ಲಕ್ಷರೂಪಾಯಿಗಳಷ್ಟು ಹಣವನ್ನು ಫೈನಾನ್ಷಿಯಲ್ ಇನ ಸ್ಟಿಟ್ಯೂಷನ್‌ಗಳಿಂದ ಪಡೆದು ಕೊಂಡು ಒಂದು ಸಾವಿರ ಮನೆಗಳನ್ನು ಕಟ್ಟಿಸಬೇಕೆಂದು ಹೇಳಿ ತೀರ್ಮಾನ ಮಾಡಿ, ಮಂಗಳೂರಿನಲ್ಲಿ ೧೪ ಮನೆಗಳನ್ನು ಕಟ್ಟಿಸಲಿಕ್ಕೆ ಈಗಾಗಲೇ ಪ್ರಯತ್ನ ಮಾಡಿದ್ದೇವೆ. ಇದಲ್ಲದೆ ಇನ್ನೂ ೫ ಭಾಗಗಳಲ್ಲಿ ಈ ರೀತಿಯಾದ ಮನೆಗಳನ್ನು ಆದ್ಯತೆಯಮೇಲೆ ಕಟ್ಟಲು ಮಂಜೂರಾತಿಯನ್ನು ಕೊಟ್ಟಿದ್ದೇವೆ, ಉಳ್ಳಾಲದಲ್ಲಿ ಪೋಲೀಸ್ ಸ್ಟೇಷನ್ ಕಟ್ಟಡವನ್ನು ಕಟ್ಟಲಿಕ್ಕೆ ಆಗುವುದಿಲ್ಲ. ಮುಂದಿನ ವರ್ಷ ಕಟ್ಟಡಕ್ಕೆ ಪ್ರಯತ್ನ ಮಾಡುತ್ತೇನೆ.

## (೪) ಆರ್ಥಿಕವಾಗಿ ಹಿಂದುಳಿದ ಫಲಾನುಭವಿಗಳಿಗೆ 'ಹುಡ್ಕೊ' ಯೋಜನೆಯನ್ವಯ ವಾರ್ಷಿಕ ವರಮಾನದ ಮಿತಿಯನ್ನು ಏರಿಸುವ ಬಗ್ಗೆ.

ಶ್ರೀಮತಿ ವಸಂತೋರಮ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ಆರ್ಥಿಕವಾಗಿ ದುರ್ಬಲರಾದವರಿಗೆ ಮಂಜೂರು ಮಾಡುವ 'ಹುಡ್ಕೋ' ಯೋಜನೆಯ ಮನೆಗಳ ಪ್ರಯೋಜನಾರ್ಥಿಗಳು ರೂ. ೨,೦೦೦ಕ್ಕೆ ಮಿರಿದ ವಾರ್ಷಿಕ ವರಮಾನವುಳ್ಳವರೆಂಬ ದೃಢಪತ್ರಿಕೆ ಒದಗಿಸಬೇಕಾಗಿದೆ. ಈ ಆದಾಯದ ಮಿತಿ ಅತ್ಯಂತ ಅವ್ಯವಹಾರಿಕವಾಗಿದ್ದು, ಸುಳ್ಳು ದೃಢಪತ್ರ ಪಡೆಯಲು ಹಾಗೂ ಸುಳ್ಳು ದೃಢಪತ್ರ ನೀಡಲು ಅಮಿಷವೊಡ್ಡುವಂತಹವಾಗಿದ್ದು, ಅನೇಕ ಕಡೆ ಅವ್ಯವಹಾರ ನಡೆಯುತ್ತಿರುವ ದೂರು ಬಂದಿದೆ. ಈಗಿನ ಪರಿಸ್ಥಿತಿಯಲ್ಲಿ ಅಂಥ ಬಡವರ ವಾರ್ಷಿಕ ವರಮಾನವನ್ನು ರೂ. ೫,೦೦೦ಕ್ಕೆ ನಿಗದಿಗೊಳಿಸುವುದು ವ್ಯವಹಾರಿಕವೂ ನ್ಯಾಯವೂ ಆಗಿರುವುದರಿಂದ ಆ ಸಲುವಾಗಿ ಸರಕಾರ ಆದಷ್ಟು ಬೇಗ ಸೂಕ್ತ ನಿರ್ಧಾರ ಕೈಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಸದಸ್ಯರಿಯವರ ಸಲಹೆ ಚೆನ್ನಾಗಿದೆ. ಇದನ್ನು ಯೋಚನೆ ಮಾಡಿ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇನೆ.

## (೫) ದ. ಕ. ಮತ್ತು ಉ. ಕ. ಜಿಲ್ಲೆಗಳ ಮೀನುಗಾರರ ಬೇಡಿಕೆಗಳ ಬಗ್ಗೆ

ಶ್ರೀ ಎನ್. ಹೆಚ್. ಗೌಡ.—ಕರ್ನಾಟಕ ರಾಜ್ಯದ ಕಡಲ ತಡಿಯಲ್ಲಿರುವ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅನೇಕ ಮೀನುಗಾರರು ಯಾಂತ್ರಿಕ ನಾವೆಗಳನ್ನು ಹೊಂದಿದ್ದು ಅವುಗಳ ಆಧಾರದಮೇಲಿಂದಲೇ ತಮ್ಮ ನಿತ್ಯ ಜೀವನವನ್ನು ಸಾಗಿಸುತ್ತಿದ್ದಾರೆ. ಆದರೆ ಯಾಂತ್ರಿಕ ನಾವೆಗಳಿಗೆ ಅಗತ್ಯವಾಗಿ ಬೇಕಾದ ಡೀಸಲ್‌ಧರ ಇತ್ತೀಚೆಗೆ ತುಂಬಾ ಹೆಚ್ಚಾಗಿದ್ದು, ಡೀಸಲ್ ಸಲುವಾಗಿ ಮೀನುಗಾರರು ಖರ್ಚು ಮಾಡುವ ಹಣಕ್ಕಾಗಿ ಸರ್ಕಾರ ಸಹಾಯ ಧನವನ್ನು (ಸಬ್‌ಸಿಡಿ) ಕೊಡದೇ ಹೋದರೆ